# ಗಿಡ ಮರ

ಮೌಲ್ಯ: ಪ್ರಕೃತಿಯನ್ನು ಅನುಸರಿಸುವುದರಿಂದ ಆಗುವ ಪ್ರಯೋಜನ ಅಪಾರ.

## ಪದಗಳ ಅರ್ಥ

1.ಬೊಡ್ಡೆ - ಮರದ ಕಾಂಡದ ಭಾಗ
2.ಅನುದಿನ - ದಿನನಿತ್ಯ
3.ತರತರ - ವಿಧವಿಧವಾದ
4.ಮನ - ಮನಸ್ಸು
5.ಹಾಳುಕೊಂಪೆ - ನಾಶಹೊಂದಿದ ಊರು

---

## ಅಭ್ಯಾಸ

ಅ.ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1.ಯಾರೇ ಏನೇ ಮಾಡಿದರೂ ಗಿಡಮರ ಏನು ಮಾಡುತ್ತದೆ?

ಉ:ಯಾರೇ ಏನೇ ಮಾಡಿದರೂ ಗಿಡಮರ ಎಲ್ಲದಕ್ಕೂ ದಿವ್ಯ ಮೌನ ತಾಳುತ್ತವೆ.

---

2.ಕಡಲುಕ್ಕುವ ಚೇತನ ಎಲ್ಲಿ ಕಾಣಬರುತ್ತದೆ?

ಉ: ಕಡಲುಕ್ಕುವ ಚೇತನ ರೆಂಬೆ ಕೊಂಬೆ ಚಿಗುರುವಲ್ಲಿ ಕಾಣಬರುತ್ತದೆ.

---

3.ಅದು ಇದು ಎಣಿಸದಿರುವುದು ಯಾವುದು?

ಉ: ಅದು ಇದು ಎಣಿಸದಿರುವುದು ಗಿಡಮರ

---

4.ಗಿಡ ಮರಗಳು ಹೇಗೆ ಬೆಳೆದು ಅರಳುತ್ತಿವೆ?

ಉ: ಗಿಡ ಮರಗಳು ಬಿಸಿಲು, ಮಳೆ, ಚಳಿಯನ್ನು ತಡೆದು ಬೆಳೆದು ಅರಳುತ್ತಿವೆ.

---

ಆ.ಕೆಳಗಿನ ಪ್ರಶ್ನೆಗಳಿಗೆ ಎರಡು -ಮೂರು ವಾಕ್ಯಗಳಲ್ಲಿ ಉತ್ತರಿಸಿ.

1.ಬೆಳೆದು ನಿಂತ ಗಿಡಮರ ಹೇಗಿವೆ?

ಉ: ಬೆಳೆದು ನಿಂತ ಗಿಡಮರ ಕಪ್ಪು ಬಣ್ಣದ ಬೊಡ್ಡೆ, ಹಚ್ಚ ಹಸಿರು ಎಲೆಗಳು, ವಿವಿಧ ರೀತಿಯ ಹೂವು, ಕಾಯಿ, ಹಣ್ಣುಗಳನ್ನು ಬಿಟ್ಟು ಪ್ರಕೃತಿಗೆ ಸೊಬಗನ್ನು ನೀಡಿವೆ.

---

2.ಯಾರ ಮಾತಿನಂತೆ ಮನ ಇಲ್ಲ? ಏಕೆ?

ಉ: ಮನುಷ್ಯನ ಮಾತಿನಂತೆ ಮನ ಇಲ್ಲ, ಏಕೆಂದರೆ ಅವನ ಮನಸ್ಸಿನ ತುಂಬೆಲ್ಲ ಕೇವಲ ವರ್ಣ, ಜಾತಿ, ಧರ್ಮ, ಮುಂತಾದ ವಿಚಾರಗಳು ತುಂಬಿಕೊಂಡಿವೆ.

---

3.ಗಿಡ ಮರಗಳು ಯಾವುದನ್ನು ಮೀರಿ ಬೆಳೆದಿವೆ?
ಉ: ಗಿಡ ಮರಗಳು ಅವನು ಇವಳು, ಅದು ಇದು, ಮೇಲು ಕೀಳು ಎಂಬುದನ್ನು ಎಣಿಸುವುದಿಲ್ಲ, ಅವು ಜಾತಿ ಗೀತಿ, ಲಿಂಗ, ಧರ್ಮ, ಎಲ್ಲವನ್ನು ಮೀರಿ ಬೆಳೆದಿವೆ.

---

ಇ.ಬಿಟ್ಟ ಸ್ಥಳವನ್ನು ಪದ್ಯದಿಂದ ಆರಿಸಿದ ಸೂಕ್ತ ಪದಗಳಿಂದ ತುಂಬಿರಿ.

1.ಎಂಥ ಸೊಗಸು ಏನು ಕಂಪು
2.ಬೆಳೆದು ನಿಂತ ಗಿಡ ಮರ
3.ರೆಂಬೆ ಕೊಂಬೆ ಚಿಗುರು ವಲ್ಲಿ
4.ಕಡಲುಕ್ಕುವ ಚೇತನ
5.ಮನುಷ್ಯನಲ್ಲಿ ಮಾತು ಉಂಟು
6.ಮಾತಿನಂತೆ ಇಲ್ಲ ಮನ
7.ಜಾತಿ-ಗೀತಿ ಲಿಂಗ -ಧರ್ಮ
8.ಮೀರಿ ಬೆಳೆದ ಗಿಡಮರ

---

ಈ.ಕೆಳಗೆ ನೀಡಿರುವ ಪದಗಳಲ್ಲಿ ಗಿಡಮರಗಳಿಗೆ ಹಾಗೂ ಮಾನವನಿಗೆ ಸಂಬಂಧಿಸಿರುವ ಪದಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿ.

| | | |
|---|---|---|
| ಬೊಡ್ಡೆ | ಮಾತು | ಅವನು |
| ಮನ | ಹಸಿರು | ಧರ್ಮ |
| ಚಿಗುರು | ಜಾತಿ | ಹೂವು |
| ಕೊಂಬೆ | ಅವಳು | ರೆಂಬೆ |

| ಉ: ಗಿಡ ಮರ. | ಮಾನವ |
|---|---|
| ಬೊಡ್ಡೆ. | ಮನ |
| ಚಿಗುರು. | ಮಾತು |
| ಕೊಂಬೆ. | ಜಾತಿ |
| ಹಸಿರು. | ಅವಳು |
| ಹೂವು. | ಅವನು |
| ರೆಂಬೆ. | ಧರ್ಮ |

---

ಉಕ್ತಲೇಖನ
1.ಹೂವು
2.ಬೆಳೆದು
3.ಬೊಡ್ಡೆ

4.ಲಿಂಗ
5.ಮೌನ
6.ಜಾತಿ
7.ಎಣಿಸುತ್ತಿಲ್ಲ
8.ಚಿಗುರು
9.ಕಂಪು
10.ದಿವ್ಯ